ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ

**ಸಿ.ಸಿ. ನಂ– 43/2018**

**ಪ್ರಾಸಾಃ 6, ಚಾಸಾಃ 8**

| | | |
|---|---|---|
| ಹೆಸರು | : | ರೇಶ್ಮಾ ತಂದೆ ಹುಲಗಪ್ಪ ಮಾದರ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸಸ್ಥಳ | : | ಮುದ್ನಾಳದ ಪದ್ಮಾವತಿ ಪ್ಲಾಟ |

ದಿನಾಂಕಃ 25/10/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ

ನನಗೆ ಚಾಸಾ 1 ನನ್ನ ತಾಯಿಯಾಗಬೇಕು, ಚಾಸಾ 4 ಮತ್ತು 5 ರವರು ನನ್ನ ಮಾವಂದಿರಾಗಬೇಕು. ಚಾಸಾ 6 ನನ್ನ ಅಜ್ಜಿಯಾಗಬೇಕು ಮತ್ತು ಚಾಸಾ 7 ನನ್ನ ಚಿಕ್ಕಮ್ಮಳಾಗಬೇಕು.

2. ದಿಃ 27/12/2017 ರಂದು ಪದ್ಮಾವತಿ ಪ್ಲಾಟ ಹತ್ತಿರ ಆರೋಪಿತರು ಆಟೋದಲ್ಲಿ ಬಂದು 1 ನೇ ಆರೋಪಿ ರಾಡಿನಿಂದ ನನ್ನ ಮಾವ ಚಾಸಾ 4 ರವರ ತಲೆಗೆ ಹೊಡೆದಿರುತ್ತಾರೆ. 2 ನೇ ಆರೋಪಿ ಕಬ್ಬಿಣದ ರಾಡಿನಿಂದ ಚಾಸಾ 5 ರವರಿಗೆ ಹೊಡೆದಿರುತ್ತಾರೆ. 7 ನೇ ಆರೋಪಿ ಚಾಸಾ 6 ರವರಿಗೆ ತಲೆಯ ಕೂದಲು ಹಿಡಿದು ಹೊಡೆದಿರುತ್ತಾರೆ. 8 ರಿಂದ 12 ನೇ ಆರೋಪಿತರು ಚಾಸಾ 4 ರಿಂದ 6 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾರೆ. 3 ಮತ್ತು 4 ನೇ ಆರೋಪಿತರು ಚಾಸಾ7 ರವರ ಮೈಮೇಲಿನ ಸೆರಗು ಎಳೆದು, ಜಂಪರ ಹರಿದು ಅವಾಚ್ಯ ಶಬ್ದಗಳಿಂದ

ಬೈದಿರುತ್ತಾರೆ. ನಂತರ ಚಾಸಾ 1 ರವರು ಮುದ್ದೇಬಿಹಾಳ ಪೋಲಿಸ ಠಾಣೆಗೆ ದೂರು ಕೊಡಲು ಹೋಗಿರುತ್ತಾರೆ. ಆಗ ಪೋಲಿಸರು ಅದೇ ದಿನ ಕಂಪ್ಲೆಂಟ ತೆಗೆದುಕೊಳ್ಳದೇ ಎರಡು ದಿನಗಳ ನಂತರ ಕಂಪ್ಲೆಂಟ ತೆಗೆದುಕೊಂಡಿರುತ್ತಾರೆ. ಚಾಸಾ 4 ರಿಂದ 6 ರವರಿಗೆ ಮುದ್ದೇಬಿಹಾಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ವಿಜಯಪೂರದ ಆಸ್ಪತ್ರೆಗೆ ಚಾಸಾ 4 ರಿಂದ 6 ರವರನ್ನು ಕರೆದುಕೊಂಡು ಹೋಗಿರುತ್ತಾರೆ. 9 ನೇ ಆರೋಪಿ ಹೋಗುವಾಗ ಬರುವಾಗ ನನಗೆ ಚುಡಾಯಿಸುತ್ತಿದ್ದ ಕಾರಣ ಚಾಸಾ 4 ಮತ್ತು 5 ರವರು ಆತನಿಗೆ ಬುದ್ದಿವಾದ ಹೇಳಿ ಹೊಡೆದ ಕಾರಣ, ಅದೇ ಸಿಟ್ಟಿನಿಂದ ಆರೋಪಿತರು ನಮ್ಮ ಜೊತೆಗೆ ಗಲಾಟೆ ಮಾಡಿರುತ್ತಾರೆ.

3. ಆ ದಿನ ನಮ್ಮ ಜೊತೆ ಗಲಾಟೆ ಮಾಡಿ ಹೊಡೆಯಲು ಬಂದಿದ್ದ ವ್ಯಕ್ತಿಗಳೇ ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ. ಸಾಕ್ಷಿ 6 ಮತ್ತು 11 ನೇ ಆರೋಪಿತರು ನ್ಯಾಯಾಲಯದ ಹಾಜರಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು 6 ಮತ್ತು 11 ನೇ ಆರೋಪಿತರು ಗೈರ ಹಾಜರ ಇದ್ದು, ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

4. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯ ಕಾವು, ಬಿದಿರಿನ

ಬಡಿಗೆಗಳು, ಕಬ್ಬಿಣದ ರಾಡುಗಳು, ಹಿಡಿಗ್ಗೈ ಅಳತೆಯ ಕಲ್ಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ರಿಂದ 8 ಎಂದು ಗುರುತಿಸಲಾಗಿದೆ.

(ಈ ಸಮಯದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟಿ ಸವಾಲುಃ ಮಾನ್ಯ ಎಪಿಪಿಯವರಿಂದ .</u>

5) 3 ಮತ್ತು 4 ನೇ ಆರೋಪಿತರು ತಮ್ಮ ಕೈಯಲ್ಲಿರುವ ಕಟ್ಟಿಗೆ ಕಾವಿನಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. 5 ಮತ್ತು 6 ನೇ ಆರೋಪಿತರು ತಮ್ಮ ಕೈಯಲ್ಲಿದ್ದ ಬಡಿಗೆಯಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. 9 ರಿಂದ 11 ನೇ ಆರೋಪಿತರು ತಮ್ಮ ಕೈಯಲ್ಲಿರುವ ಕಲ್ಲುಗಳಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. 8 ಮತ್ತು 12 ನೇ ಆರೋಪಿತರು ಚಾಸಾ 6 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಎಂದರೆ ಸರಿ. ಗಲಾಟೆಯನ್ನು ಚಾಸಾ 7 ರವರು ಬಿಡಿಸಲು ಹೋಗಿದ್ದರು ಎಂದರೆ ಸರಿ. ಗಲಾಟೆಯನ್ನು ಚಾಸಾ 9 ರಿಂದ 11 ರವರು ಬಿಡಿಸಿರುತ್ತಾರೆ ಎಂದರೆ ಸರಿ. ಹೋಗುವಾಗ ಆರೋಪಿತರು ನೀವು ಹೇಗೆ ಜೀವನ

ಮಾಡತಿರಿ ಮಾಡಿರಿ ಅಂತಾ ಹೇಳಿ ಪ್ರಾಣ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿಯಲ್ಲ.

6. ಚಾಸಾ 5 ರವರಿಗೆ ಎರಡೂ ಕೈಗಳಿಗೆ, ಮುಂಡಿಗೆ, ಸೊಂಟಕ್ಕೆ, ಬೆನ್ನಿಗೆ ಮತ್ತು ಎರಡೂ ತೊಡೆಗಳಿಗೆ ತೆರಚಿದ ಗಾಯ ಮತ್ತು ಪೆಟ್ಟುಗಳಾಗಿರುತ್ತವೆ ಎಂದರೆ ಸರಿ. ಚಾಸಾ 4 ರವರಿಗೆ ತಲೆಯ ಹಿಂಬದಿಗೆ, ಹಣೆಗೆ, ಮಲಕಿಗೆ, ಬಲ ಮುಂಡಿಗೆ, ಬಲಗಾಲಿಗೆ ಮತ್ತು ಕಣ್ಣಿಗೆ ಪೆಟ್ಟುಗಳಾಗಿರುತ್ತವೆ ಎಂದರೆ ಸರಿ. ಆರೋಪಿತರು ಚಾಸಾ 7 ರವರಿಗೆ ಹೊಡೆದ ಕಾರಣ ಅವರ ಬೆನ್ನಿಗೆ, ಹೆಡಕಿಗೆ, ತೊಡೆಗೆ, ಬಲಗೈ ಮುಂಗೈಗೆ ಮತ್ತು ಬಲಗಣ್ಣಿನ ಕೆಳಗೆ ಚೂರಿದ ಗಾಯಗಳಾಗಿರುತ್ತವೆ ಎಂದರೆ ಸರಿ. ಸರಕಾರಿ ಆಸ್ಪತ್ರೆಗೆ ಚಾಸಾ 7 ರವರೂ ಸಹ ಹೋಗಿದ್ದರು ಎಂದರೆ ಸರಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಹೆಚ್ ಹೆಚ್ ವಕೀಲರಿಂದ**

7. ಗಲಾಟೆಯಾದಾಗ ನಾನು ಮನೆಯಲ್ಲಿದ್ದೆನು ಎಂದರೆ ಸರಿ. ನಾನು ಬರುವ ಪೂರ್ವದಲ್ಲಿ ಆರೋಪಿತರು ಚಾಸಾ 4 ರಿಂದ 6 ರವರಿಗೆ ಹೊಡೆದಿದ್ದರು. ಗಲಾಟೆಯಾದಾಗ ಅಲ್ಲಿ 10–15 ಜನ ನೋಡಲು ಸೇರಿದ್ದರು. ಪೋಲಿಸರು

ಜಗಳ ಆದ ಎರಡು ದಿನಕ್ಕೆ ನನ್ನ ಹೇಳಿಕೆ ತೆಗೆದುಕೊಂಡಿರುತ್ತಾರೆ. ಆರೋಪಿತರು ಆಟೋ ತೆಗೆದುಕೊಂಡು ಬಂದಿರುತ್ತಾರೆ ಅಂತಾ ಹೇಳಿ ನಾನು ಪೋಲಿಸರು ಮುಂದೆ ಹೇಳಿರುವುದಿಲ್ಲ. ಚಾಸಾ 7 ರವರ ಹರಿದ ಸೀರೆ ಮತ್ತು ಜಂಪರನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಚಾಸಾ 4 ರಿಂದ 6 ರವರಿಗೆ ಆರೋಪಿತರು ಹೊಡೆದ ಕಾರಣ ರಕ್ತ ಬಂದು ಅವರ ಬಟ್ಟೆ ಸಹ ರಕ್ತದ ಕಲೆಗಳಾಗಿದ್ದವು. ಚಾಸಾ 4 ರಿಂದ 6 ರವರ ರಕ್ತವಾದ ಬಟ್ಟೆಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. 9 ನೇ ಆರೋಪಿ ಹೋಗುವಾಗ ಬರುವಾಗ ನನಗೆ ಚುಡಾಯಿಸುತ್ತಿದ್ದ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಚಾಸಾ 1 ರವರು ಘಟನೆಯಾದ 1.30 ರಿಂದ 2.00 ಗಂಟೆಯೊಳಗೆ ಕೊಟ್ಟಿರುತ್ತಾರೆ. ಆರೋಪಿತರು ಕಲ್ಲು, ಬಡಿಗೆ ಮತ್ತು ಕಬ್ಬಿಣದ ರಾಡಿನಿಂದ ಹೊಡೆದಾಗ ಅವುಗಳಿಗೆ ರಕ್ತದ ಕಲೆಗಳು ಆಗಿರುತ್ತವೆ. ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 8 ರ ಮೇಲೆ ಯಾವುದೇ ರಕ್ತದ ಕಲೆಗಳು ಇರುವುದಿಲ್ಲ ಎಂದರೆ ಸರಿ. ಮು.ಮಾ 1 ರಿಂದ 8 ರಂತಹ ವಸ್ತುಗಳು ಹೊರಗಡೆ ಸಿಗುತ್ತವೆ ಎಂದರೆ ಸರಿ.

8. ಗಲಾಟೆಯಾದ ಸ್ಥಳದ ಉತ್ತರಕ್ಕೆ ಗಣೇಶ ನಾಯಕ ಇವರ ಮನೆ, ಪಶ್ಚಿಮಕ್ಕೆ ನಮ್ಮ ಮನೆ ಇರುತ್ತದೆ, ದಕ್ಷಿಣಕ್ಕೆ ದುರ್ಗವ್ವ ಇವರ ಮನೆ, ಪೂರ್ವಕ್ಕೆ ಮಲ್ಲವ್ವ

ಮುರಾಳ ಇವರ ಮನೆ ಇರುತ್ತದೆ. ಯಾವ ಯಾವ ಆರೋಪಿತರು ಎಷ್ಟೆಷ್ಟು ಏಟುಗಳನ್ನು ಹೊಡೆದಿರುತ್ತಾರೆ ಅಂತಾ ಹೇಳಿ ನಾನು ನೋಡಿರುವುದಿಲ್ಲ.

9. 3 ಮತ್ತು 4 ನೇ ಆರೋಪಿತರು ತಮ್ಮ ಕೈಯಲ್ಲಿರುವ ಕಟ್ಟಿಗೆ ಕಾವಿನಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಆರೋಪಿತರು ತಮ್ಮ ಕೈಯಲ್ಲಿದ್ದ ಬಡಿಗೆಯಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 9 ರಿಂದ 11 ನೇ ಆರೋಪಿತರು ತಮ್ಮ ಕೈಯಲ್ಲಿರುವ ಕಲ್ಲುಗಳಿಂದ ಚಾಸಾ 4 ಮತ್ತು 5 ರವರಿಗೆ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರು ಚಾಸಾ 7 ರವರಿಗೆ ಸೀರೆ ಮತ್ತು ಜಂಪರ ಹಿಡಿದು ಜಗ್ಗಾಡಿ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 12 ನೇ ಆರೋಪಿತರು ಚಾಸಾ 6 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಸಂಗಪ್ಪ ಮಾದರ ಅವರ ಸೊಸೆಯ ಸಲುವಾಗಿ ಚಾಸಾ 5 ರವರ ಜೊತೆಗೆ

ಈ ಘಟನೆಯಾಗುವ ಪೂರ್ವದಲ್ಲಿ ಗಲಾಟೆಯಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಚಾಸಾ 5 ರವರಿಗೆ ಬುದ್ದಿವಾದ ಹೇಳಲು ಹೋಗಿದ್ದರು ಎಂದರೆ ಸರಿಯಲ್ಲ. ಆ ಕಾರಣ ನಾನು ಚಾಸಾ 1, 4 ಮತ್ತು 7 ರವರ ಪರವಾಗಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರು ಹೆಣ್ಣು ಮಕ್ಕಳಿಗೆ ಚುಡಾಯಿಸಿದ್ದಕ್ಕೆ ಆತನ ವಿರುದ್ದ ಕೇಸು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ 4 ರವರಿಗೆ ಹೆಣ್ಣು ಮಕ್ಕಳು ಚುಡಾಯಿಸಿದ್ದಕ್ಕೆ ಬುದ್ದಿವಾದ ಹೇಳಲು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ಮತ್ತು 4 ರಿಂದ 7 ರವರು ಆರೋಪಿತರ ವಿರುದ್ದ ಸೇಡು ತೀರಿಸಿಕೊಳ್ಳುವ ಸಲುವಾಗಿ ಚಾಸಾ 1 ರವರ ವಿರುದ್ದ ಸುಳ್ಳು ಕೇಸು ಮಾಡಿರುತ್ತಾರೆ ಎಂದರೆ ಸರಿಯಲ್ಲ.

11. ಆರೋಪಿತರು ಚಾಸಾ 7 ರವರಿಗೆ ಹೊಡೆದು ಎದೆಯ ಮೇಲಿನ ಸೀರೆ ಹಿಡಿದು ಜಗ್ಗಾಡಿ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 5 ರವರಿಗೆ ಆರೋಪಿತರು ಕೈಗೆ, ಬೆನ್ನಿಗೆ, ಸೊಂಟಕ್ಕೆ ಹೊಡೆದು ಗಾಯಪಡಿಸಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರಿಗೆ ಆರೋಪಿತರು

ಬೆನ್ನಿಗೆ, ಮಲಕಿಗೆ, ಬಲತೊಡೆದು ಹೊಡೆದು ಗಾಯಪಡಿಸಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 6 ರವರಿಗೆ ಹೊಡೆದು ತಲೆಗೆ ಮತ್ತು ಬೆನ್ನಿಗೆ ಮತ್ತು ಕೈಕಾಲಿಗೆ ಗಾಯಪಡಿಸಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 4 ರಿಂದ 7 ರವರಿಗೆ ಜೀವದ ಭಯ ಹಾಕಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ಸ್ಥಳದಿಂದ ಪೋಲಿಸ ಠಾಣೆ 3 ಕಿ. ಮೀ ದೂರ ಇರುತ್ತದೆ. ಆ ದಿನ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 4 ರಿಂದ 6 ರವರಿಗೆ ಮು.ಮಾ 1 ರಿಂದ 8 ಗಳಿಂದ ಹೊಡೆದಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ
(ತೆ ನ್ಯಾ, ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ